# ಶ್ರೀದೇವಿಯ ಅನುಸಂಧಾನ



**ಇಬ್ಬರಿಗೂ ಶಾಕ್ ಹೊಡೆದಂತಾಯಿತು. ಅವಳಿಗೆ ಆಗಿನ್ನೂ ಹದಿನೈದು ವರ್ಷ. ಪಿಯುಸಿ ವಿದ್ಯಾರ್ಥಿನಿ. ಇಷ್ಟು ಸಣ್ಣ ವಯಸ್ಸಿನಲ್ಲಿ ಈ ಕಾಯಿಲೆಯೇ?!**

**■ ಡಾ.ಜಿ.ಎಸ್.ಭಟ್**

ಆರೆಸ್ಸೆಸ್‌ನ ಪ್ರಮುಖರಾದ ಕೃಷ್ಣಪ್ಪನವರ ಮಿತ್ರರಲ್ಲಿ ನಾಗರಾಜ್ ಒಬ್ಬರು. ಅವರೂ ಆರೆಸ್ಸೆಸ್ ಕಾರ್ಯಕರ್ತರು. ಬೆಂಗಳೂರಿನ ಬಸವನಗುಡಿಯಲ್ಲಿ ವಾಸ. ಒಮ್ಮೆ ಕೃಷ್ಣಪ್ಪ ಮತ್ತು ಡಾ. ಉಪೇಂದ್ರ ಅವರು ನಾಗರಾಜ್‌ರ ಮನೆಗೆ ಹೋದರು. ಮೂವರೂ ಸ್ವಲ್ಪ ಹೊತ್ತು ಲೋಕಾಭಿರಾಮವಾಗಿ ಮಾತನಾಡಿದರು. ನಂತರ ಡಾ.ಉಪೇಂದ್ರರು ‘ನಿಮ್ಮ ಮಗಳು ಶ್ರೀದೇವಿ ಎಲ್ಲಿ?’ ಎಂದು ಕೇಳಿದರು. ಆಗ ನಾಗರಾಜ್ ‘ಅವಳಿಗೆ ನಾಚಿಕೆ; ಹೊರಗೆ ಬರುತ್ತಿಲ್ಲ’ ಎಂದರು. ಕೃಷ್ಣಪ್ಪ ಮತ್ತು ಡಾ.ಉಪೇಂದ್ರ ಇಬ್ಬರೂ ಆ ಹುಡುಗಿಯನ್ನು ಮಗುವಿದ್ದಾಗಿನಿಂದ ನೋಡಿದವರು. ಅದರಲ್ಲೂ ಡಾ.ಉಪೇಂದ್ರ ಎಂದರೆ ಅವಳಿಗೆ ನೆಚ್ಚಿನ ಬಂಧು. ಹಾಗಾಗಿ ‘ನಮ್ಮನ್ನು ನೋಡಲು ಅವಳಿಗೇಕೆ ನಾಚಿಕೆ?’ ಎಂದು ಡಾಕ್ಟರ್ ಕೇಳಿದರು. ಆಗ ನಾಗರಾಜ್ ‘ಅವಳಿಗೆ ಮೂರು ತಿಂಗಳ ಹಿಂದೆ ಗರ್ಭಕೋಶದಲ್ಲಿ ಕ್ಯಾನ್ಸರ್ ಎಂದು ಗೊತ್ತಾಯಿತು. ಡಾಕ್ಟರರಿಗೆ ತೋರಿಸಿದ್ದು ಕೀಮೋಥೆರಪಿ ನೀಡುತ್ತಿದ್ದಾರೆ. ಎರಡು ಬಾರಿ ಆಗಿದೆ. ಕೂದಲೆಲ್ಲಾ ಉದುರಿ ಹೋಗಿದೆ. ತಲೆಗೆ ಬಟ್ಟೆ ಸುತ್ತಿಕೊಂಡಿದ್ದಾಳೆ. ಹಾಗಾಗಿ ನಾಚಿಕೆ’ ಎಂದರು.

ಇಬ್ಬರಿಗೂ ಶಾಕ್ ಹೊಡೆದಂತಾಯಿತು. ಅವಳಿಗೆ ಆಗಿನ್ನೂ ಹದಿನೈದು ವರ್ಷ. ಪಿಯುಸಿ ವಿದ್ಯಾರ್ಥಿನಿ. ಇಷ್ಟು ಸಣ್ಣ ವಯಸ್ಸಿನಲ್ಲಿ ಈ ಕಾಯಿಲೆಯೇ?! ಡಾ.ಉಪೇಂದ್ರ ಅವಳಿರುವಲ್ಲಿಗೇ ಹುಡುಕಿಕೊಂಡು ಹೋದರು. ಅವರನ್ನು ನೋಡಿದ ಕೂಡಲೇ ಓಡಿ ಬಂದು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಡಾಕ್ಟರು ಅವಳ ಬೆನ್ನು ಸವರುತ್ತಾ ‘ಅಷ್ಟೇಕೆ ಹೆದರುತ್ತೀ? ನಾನಿದ್ದೇನೆ, ಏನಾಗಿದೆ ನಿನಗೆ ಹೇಳು?’ ಅಂದರು. ಅವಳ ತಾಯಿಯೂ ಅಲ್ಲಿಗೆ ಬಂದರು. ತಮ್ಮ ಮನಸ್ಸಿನ ದುಗುಡವನ್ನು ತೋಡಿಕೊಂಡರು. ‘ಆಸ್ಪತ್ರೆಯಲ್ಲಿ ಇದೊಂದೇ ದಾರಿಯೆಂದು ಕೀಮೋಥೆರಪಿ ಕೊಡುತ್ತಿದ್ದಾರೆ. ಇವಳಿಗೆ ಸಂಕಟ, ನೋವು ತಡೆಯಲಾಗುತ್ತಿಲ್ಲ. ಜತೆಗೆ ಕೂದಲು ಉದುರಿ ಮೈ ಕಪ್ಪಾಗಿ ಮುದುಕಿಯಂತೆ ಆಗಿದ್ದಾಳೆ. ಕನ್ನಡಿಯ ಮುಂದೆ ಹೋಗುವುದನ್ನೇ ನಿಲ್ಲಿಸಿದ್ದಾಳೆ. ನಾವಾದರೂ ಏನು ಮಾಡಲು ಬರುತ್ತದೆ? ಕೀಮೋಥೆರಪಿಯಿಂದ ಇದೆಲ್ಲಾ ಆಗಿಯೇ ಆಗುತ್ತದೆ. ಬೇರೆ ಪದ್ಧತಿಯ ಬಗ್ಗೆ ನಮಗೇನೂ ಗೊತ್ತಿಲ್ಲ; ನಂಬಿಕೆಯೂ ಇಲ್ಲ’ ಎಂದರು.




ಡಾ. ಉಪೇಂದ್ರ ಶಾಂತವಾಗಿ ‘ನನಗೇಕೆ ಮುಂಚೆ ಹೇಳಲಿಲ್ಲ? ಹೋಗಲಿ ಬಿಡಿ. ಈಗಲೂ ನಾನು ಹೇಳಿದಂತೆ ಕೇಳಬಹುದು. ಮುಂದಿನ ಕೀಮೋಥೆರಪಿಗೆ ಯಾವಾಗ ಬರಲು ಹೇಳಿದ್ದಾರೆ?’ ಎಂದು ಪ್ರಶ್ನಿಸಿದರು.

‘ಇಪ್ಪತ್ತು ದಿನಗಳ ನಂತರ’ ಎಂದರು ಅವರು.

‘ಸರಿ. ಹಾಗಾದರೆ, ನಾನು ಹೇಳುವ ಪಥ್ಯ ಮಾಡಿ. ಕೃಷ್ಣಪ್ಪನವರು ಇದೇ ಪಥ್ಯ ಪಾಲಿಸುತ್ತಾ ಕ್ಯಾನ್ಸರ್ ಜತೆಯಲ್ಲಿ ಓಡಾಡಿಕೊಂಡಿದ್ದಾರೆ. ನಿಮಗೆ ಗೊತ್ತಲ್ಲ! ಅವರಿಗೆ ನಿತ್ಯವೂ ಪ್ರವಾಸ ಇದೆ. ಅವರಿಗೆ ಸಾಧ್ಯವಾದುದು ನಿಮಗೇಕೆ ಆಗಬಾರದು?’ ಎಂದು ಹೇಳಿ, ತಾವೇ ಪಥ್ಯದ ವಿವರಗಳನ್ನು ಬರೆದುಕೊಟ್ಟರು.

ಆ ಹುಡುಗಿಗೆ ಈ ಡಾಕ್ಟರರನ್ನು ಕಂಡರೆ ಪ್ರೀತಿಯಷ್ಟೇ ಅಲ್ಲ; ಅವರು ದೇವರು ಎಂಬಷ್ಟು ನಂಬಿಕೆ. ಅವಳು ಡಾ. ಉಪೇಂದ್ರ ಹೇಳಿದಂತೆ ಪಥ್ಯವನ್ನು ಪಾಲಿಸಿದಳು.

ಇಪ್ಪತ್ತನೇ ದಿನ ಕೀಮೋಥೆರಪಿಗೆ ಹೋದರು. ಅಲ್ಲಿನ ಡಾಕ್ಟರರು ಮಾಮೂಲಿನಂತೆ ರಕ್ತ ಪರೀಕ್ಷೆ ಮಾಡಿಸಿದರು. ಶಾಂತವಾಗಿ ‘ಏನಮ್ಮ? ಏನೇನು ಔಷಧ ತೆಗೆದುಕೊಳ್ಳುತ್ತಿದ್ದೀಯೇ?’ ಎಂದು ವಿಚಾರಿಸಿದರು. ಹುಡುಗಿ, ‘ಡಾ.ಉಪೇಂದ್ರ ಶೆಣೈ ಎಂಬ ಅಪ್ಪನ ಗೆಳೆಯರೊಬ್ಬರು ಹೇಳಿದ ಪಥ್ಯ ಮಾಡುತ್ತಿರುವೆ’ ಎಂದಳು. ‘ಏನೇನು ಪಥ್ಯ?’ ಎಂದು ವಿಚಾರಿಸಿ, ಎಲ್ಲವನ್ನೂ ವಿವರವಾಗಿ ಕೇಳಿಕೊಂಡು ‘ಒಳ್ಳೆಯದಮ್ಮ, ಈಗ ನಿನಗೆ ಕೀಮೋ ಕೊಡುವುದಿಲ್ಲ. ಇನ್ನೊಂದು ತಿಂಗಳ ನಂತರ ನೋಡೋಣ. ಅಲ್ಲಿಯವರೆಗೆ ಆ ಪಥ್ಯವನ್ನೇ ಮಾಡುತ್ತಿರು’ ಎಂದು ಹೇಳಿ ಕಳುಹಿಸಿಕೊಟ್ಟರು.

ಒಂದು ತಿಂಗಳು ಕಳೆದು ಪುನಃ ಡಾಕ್ಟರರಲ್ಲಿಗೆ ಹೋದಾಗ, ಪರೀಕ್ಷಿಸಿ ‘ನೀನು ಮಾಡುತ್ತಿರುವ ಪಥ್ಯ ಚೆನ್ನಾಗಿದೆ. ನಿನಗೆ ಪರಿಣಾಮಕಾರಿಯಾಗಿ ಗುಣವಾಗುತ್ತಿದೆ. ಆ ಪಥ್ಯವನ್ನೇ ಮುಂದುವರಿಸು. ಮತ್ತೇನಾದರೂ ತೊಂದರೆ ಕಾಣಿಸಿಕೊಂಡರೆ ಮಾತ್ರ ಇಲ್ಲಿಗೆ ಬಾ’ ಎಂದ ತಲೆ ಸವರಿ ಆಶೀರ್ವಾದ ಮಾಡಿ ಕಳುಹಿಸಿದರು. ಡಾ.ಉಪೇಂದ್ರ ಶೆಣೈ ಅವರಿಗೆ ವಿಷಯ ತಿಳಿದು ಸಂತೋಷವಾಯಿತು. ನಿಧಾನವಾಗಿ ಅವಳ ತಲೆ ಕೂದಲು ಬೆಳೆಯಿತು. ಕಾಲೇಜಿಗೂ ಹೋಗಲಾರಾಂಭಿಸಿದಳು. ಬಿ.ಕಾಂ. ಪದವೀಧರೆಯಾದಳು. ಕೆಲಸಕ್ಕೂ ಸೇರಿ ಸಂಪಾದನೆ ಮಾಡಲಾರಂಭಿಸಿದಳು.

ಆಗ ತಂದೆ ತಾಯಿಗಳಿಗೆ ಬೇರೊಂದು ಚಿಂತೆ ಪ್ರಾರಂಭವಾಯಿತು. ಮಗಳು ಆರೋಗ್ಯವಂತಳಾಗಿದ್ದಾಳೆ. ಸಂಪಾದನೆ ಮಾಡುತ್ತಿದ್ದಾಳೆ. ಅವಳಿಗೆ ಮದುವೆ ಮಾಡಬೇಕೋ.. ಬೇಡವೋ? ಅಲೋಪತಿ ವೈದ್ಯರು ‘ಮದುವೆ ಕೂಡದು; ಅವಳು ಮದುವೆಯಾಗಿ ಗರ್ಭಿಣಿಯಾದರೆ ಸತ್ತೇ ಹೋದಾಳು’ ಎಂದರು.

ಆದರೆ ಹೆತ್ತವರ ಮನಸ್ಸಲ್ಲವೇ? ಹತ್ತಾರು ಹಿರಿಯರನ್ನು ಸಂಪರ್ಕಿಸಿದರೂ ಒಂದೇ ಉತ್ತರ ಬಂತು. ‘ಗರ್ಭಾಶಯದ ಕ್ಯಾನ್ಸರ್ ಎನ್ನುತ್ತೀರಿ. ಅವಳಿಗೆ ಮದುವೆ ಎಂಬ ಮಾತು ಬೇಡ. ಮಗನೆಂದೇ ಭಾವಿಸಿ ಸಾಕಿ’ ಎಂದರು.

ಆದರೆ ಡಾ. ನಾಗರತ್ನ ಮತ್ತು ಡಾ. ಉಪೇಂದ್ರ ಸ್ವಲ್ಪ ಭಿನ್ನ ನಿಲುವು ತಾಳಿದರು. ‘ಅವಳು ಕೆಲಸ ಮಾಡುತ್ತಿದ್ದಾಳಲ್ಲ. ಒಂದು ವರ್ಷ ಅವಳ ಶರೀರದಾರ್ಢ್ಯ, ಮನೋಬಲವನ್ನು ಪರಿಶೀಲಿಸಿ ನಿರ್ಣಯ ಮಾಡಬಹುದು’ ಎಂದರು.

ಮುಂದಿನ ಒಂದು ವರ್ಷದ ಅವಧಿಯಲ್ಲಿ ಅವಳಿಗೆ ಸುಸ್ತು, ಮೈ ಕೈ ನೋವು, ತಲೆನೋವು ಇತ್ಯಾದಿ ಬರಬಹುದೇ ಎಂದು ಕಾದರು. ಏನೂ ಇಲ್ಲವೆಂಬುದು ಖಾತ್ರಿಯಾಯಿತು. ಮದುವೆ ಮಾಡಬಹುದೆಂಬ ನಿರ್ಧಾರಕ್ಕೆ ಬಂದರು. ಮದುವೆ ಆಗಲಿರುವ ಗಂಡಿಗೆ ಮೊದಲೇ ವಿಷಯ ತಿಳಿಸಿ, ಅವನೊಪ್ಪಿದರೆ ಮಾತ್ರ ಮದುವೆ ಎಂಬ ಸಲಹೆಯನ್ನು ಒಪ್ಪಿದರು.

ಅವಳ ಅದೃಷ್ಟ! ಹೆಚ್ಚು ಹುಡುಕಾಟವಿಲ್ಲದೇ ಒಳ್ಳೆಯ ಗಂಡನೊಬ್ಬ ಸಿಕ್ಕ. ಮದುವೆ ಆಯಿತು. ಎರಡು ಮಕ್ಕಳ ತಾಯಿಯಾಗಿ ಹಾಯಾಗಿ ಇದ್ದಾಳೆ. ಪಥ್ಯ ಮುಂದುವರಿಸಿದ್ದಾಳೆ!

(ಕ್ಯಾನ್ಸರ್ ಎದುರಿಸಿ ಯಶಸ್ವಿಯಾಗಿ ಬದುಕುತ್ತಿರುವ ಹಲವರ ಅನುಭವ ಕಥನಗಳುಳ್ಳ ‘ಮೃತ್ಯು ಮಿತ್ರ’ ಎಂಬ ಪುಸ್ತಕದಿಂದ ಈ ಲೇಖನ ಆಯ್ದುಕೊಳ್ಳಲಾಗಿದೆ. ನವೆಂಬರ್ ಕೊನೇ ವಾರ ಬಿಡುಗಡೆಯಾಗಲಿರುವ ಈ ಪುಸ್ತಕ ಓದುಗರಿಗೆ ಉಚಿತವಾಗಿ ಲಭ್ಯ. ಉಚಿತ ಪ್ರತಿಗಳಿಗಾಗಿ ಪ್ರಕಾಶಕ ಗೋವರ್ಧನ ಅಂಕೋಲೇಕರ್– ದೂರವಾಣಿ: 93410–80609/ 08183–221001 ಇವರನ್ನು ಸಂಪರ್ಕಿಸಬಹುದು.)

■